ಸಿ ಸಿ ನಂ. 316 /2019

ಸಾಕ್ಷಿಗೆ ದಿನಾಂಕ 18-05-2023 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 2 P.W.: 2

| | | |
|---|---|---|
| ಹೆಸರು | : | ಯು. ಶಿವಶಂಕರ |
| ತಂದೆಯ ಹೆಸರು | : | ಯು. ಅನಂತಶಯನ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಉಪ ತಹಶೀಲ್ದಾರ್, ಹಂಪಸಾಗರ ನಾಡಕಚೇರಿ |
| ವಾಸ ಸ್ಥಳ | : | ಹೂ. ಹಡಗಲಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನಾನು ಹಂಪಸಾಗರ ನಾಡಕಚೇರಿಯಲ್ಲಿ 2017 ನೇ ಸಾಲಿನಿಂದ ಇಲ್ಲಿಯವರೆಗೂ ಉಪ ತಹಶೀಲ್ದಾರ್‌ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 10-08-2019 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಚಾಸಾ-1 ಎಸ್. ಕೆ ಮಲ್ಲಿಕಾರ್ಜುನರವರು, ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ಚಾಸಾ-4 ಪಿ ಎನ್ ಲೋಕೇಶ್ ರವರ ಸಮಕ್ಷಮದಲ್ಲಿ ಹಂಪಾಸಾಗರ-3 ಗ್ರಾಮದ 1 ನೇ ಆರೋಪಿಯಾದ ಹೊಳಗುಂದಿ ಗಂಗಪ್ಪನವರ ನ್ಯಾಯಬೆಲೆ ಅಂಗಡಿಯ ದಾಖಲೆಗಳನ್ನು ಆಹಾರ ಶೀರಸ್ತೆದಾರ ಆದಂತಹ 1 ನೇ ಆರೋಪಿತನ ನ್ಯಾಯಬೆಲೆ ಅಂಗಡಿಯ ದಾಖಲಾತಿಗಳನ್ನು ನೋಡುತ್ತಿರುವಾಗ 1 ನೇ ಆರೋಪಿಯು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಜಗಳವನ್ನು ಬಿಡಿಸಲು ಬಂದ ಚಾಸಾ- 4 ಮತ್ತು ಚಾಸಾ-5 ರವರನ್ನು ತಳ್ಳಾಡಿದರು. 2 ನೇ ಆರೋಪಿಯಾದ ಹೊಳಗುಂದಿ ರಮೇಶ ರವರು ಚಾಸಾ-1 ರವರ ಮೇಲೆ ಹಲ್ಲೆ ಮಾಡಿದ್ದು, 1 ರಿಂದ 5 ನೇ ಆರೋಪಿತರು ಅವರನ್ನು ತಳ್ಳಾಡಿ ಅವರ ಮೇಲೆ ಹಲ್ಲೆ ನಡೆಸಿರುತ್ತಾರೆ ಹಾಗೂ ಪ್ರಾಣ ಬೆದರಿಕೆಯನ್ನು ಸಹ ಹಾಕಿರುತ್ತಾರೆ. 1 ರಿಂದ 5 ನೇ ಆರೋಪಿತರು ಅಕ್ರಮ ಗುಂಪನ್ನು ಕಟ್ಟಿಕೊಂಡು ಬಂದು ಚಾಸಾ-1, 4 ಮತ್ತು 5 ಅವರಿಗೆ ಕರ್ತವ್ಯವನ್ನು ಮಾಡದಂತೆ ಅಡ್ಡಿಪಡಿಸಿರುತ್ತಾರೆ.

ದಿಃ 11-08-2019 ರಂದು ಬೆಳಿಗ್ಗೆ 7-00 ಗಂಟೆಯಿಂದ 5-00 ಗಂಟೆಯ ಸಮಯದವರೆಗೆ ಘಟನಾ ಸ್ಥಳವನ್ನು ಚಾಸಾ-1 ರವರು

ಪೊಲೀಸರಿಗೆ ತೋರಿಸಿದ್ದು, ನಾನು ಮತ್ತು ಚಾಸಾ-3 ರವರು ಸದರಿ ಸ್ಥಳವನ್ನು ಪರಿಶೀಲಿಸಿರುತ್ತೇವೆ. ಸದರಿ ಸ್ಥಳವು ಹಂಪಸಾಗರ-3 ಗ್ರಾಮದ ಸಮುದಾಯ ಭವನವಾಗಿದ್ದು, ಸದರಿ ಸಮುದಾಯ ಭವನದ ಪೂರ್ವಕ್ಕೆ: ಖಾಲಿ ಜಾಗ, ಪಶ್ಚಿಮಕ್ಕೆ: ಖಾಲಿ ಜಾಗ ಮತ್ತು ಓಣಿ, ಉತ್ತರಕ್ಕೆ: ಹಂಪಸಾಗರ ಮತ್ತು ಹ ಬೊ ಹಳ್ಳಿಯ ಮುಖ್ಯ ತಾರ್ ರಸ್ತೆ, ದಕ್ಷಿಣಕ್ಕೆ: ಖಾಲಿ ಜಾಗ ಸಮುದಾಯ ಭವನ ಇರುತ್ತದೆ.

ಸಮುದಾಯ ಭವನದ ಒಳ ಭಾಗಕ್ಕೆ ಒಂದು ದೊಡ್ಡ ಹಾಲ್ ಇರುತ್ತದೆ. ಈ ಹಾಲ್ ನಲ್ಲಿ ಪಡಿತರ ಅಕ್ಕಿ ಚೀಲಗಳನ್ನು ಇಡಲಾಗಿದ್ದು. ಅಕ್ಕಿಯನ್ನು ಚೆಲ್ಲಾ-ಪಿಲ್ಲಿ ಯಾಗಿ ನೆಲದ ಮೇಲೆ ಬಿದ್ದಿದ್ದವು. ಸದರಿ ಜಾಗದಲ್ಲಿ ಒಂದು ತೂಕದ ಯಂತ್ರದ ಮಿಶೀನ ಇತ್ತು . ಸದರಿ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಲಾಗಿದ್ದು ನಾನು ಅದಕ್ಕೆ ಸಾಕ್ಷಿದಾರನಾಗಿ ಸಹಿಯನ್ನು ಮಾಡಿರುತ್ತೇನೆ. ನಿಪಿ 1 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ನಿಪಿ 2 ರಲ್ಲಿರುವ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ನಿಪಿ 3 ಮತ್ತು 4 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

1 ರಿಂದ 5 ನೇ ಆರೋಪಿತರ ಗೈರು ಹಾಜರಾತಿಯಲ್ಲಿ ಅವರನ್ನು ಗುರುತಿಸಲು ಆರೋಪಿತರ ವಕೀಲರ ಪರ ತಕರಾರು ಇರುವುದಿಲ್ಲ.

ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ